ಗುಲ್ಬರ್ಗಾದಲ್ಲೂ ಕೂಡ ಯಾರು ಪ್ರಭಾವ ಬೀರುತ್ತಾರೆ ಅಂಥವರಿಗೆ ನೀವು ಕಳುಹಿಸಿಕೊಡುತ್ತೀರಿ ಕೆಲಸದ ಮೇಲೆ ನೀವು ಅವರಿಗೆ ಕೊಟ್ಟಿದ್ದೀರೇನು

ಅಧ್ಯಕ್ಷರು : ಟೋಟಲ್ ಟ್ಯಾಂಕ್ಸ್ ಜಿಲ್ಲಾಪರಿಷತ್‌ದ್ದಿಷ್ಟು? ಮೈನರ್ ಇರಿಗೇಶನ್‌ದಿಷ್ಟು ಎಂದು ಆ ಮೇಲೆ ವಿವರ ತರಿಸಿಕೊಡುತ್ತೇನೆಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಅಧ್ಯಕ್ಷರೇ, ಜಿಲ್ಲಾಪರಿಷತ್‌ದ್ದು ಇವರಿಗೆ ಬರುವುದಿಲ್ಲವಲ್ಲ, ಇವರ ಡಿಪಾರ್ಟ್‌ಮೆಂಟ್‌ದು ಎಷ್ಟು?

ಅಧ್ಯಕ್ಷರು : ಟೋಟಲ್ ಟ್ಯಾಂಕ್ಸ್ ಲಿಸ್ಟ್ ಬಂದು ಬಿಟ್ಟಿದೆ ಕ್ಲಾಸಿಫೈ ಮಾಡಿಬಿಟ್ಟು ಹೇಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮ ಉದ್ದೇಶ ಏನೆಂದರೆ ಅಧ್ಯಕ್ಷರೇ, ಅವರು ಪತ್ರ ಬರೆದರೂ ಹೇಳುವುದಿಲ್ಲ, ಸದನದಲ್ಲಿಯಾದರೂ ಕೇಳಿದರೆ ಪರಿಹಾರ ಸಿಗುತ್ತದೇನೋ ಎಂದು ಆಸೆ. ನಾನು ಮೈನರ್ ಇರಿಗೇಶನ್ ಟ್ಯಾಂಕ್ಸ್ ಬಗ್ಗೆ ತಾಲ್ಲೂಕು ವೈಸ್ ಸ್ಪಷ್ಟವಾಗಿ ಕೇಳುವ ಉದ್ದೇಶವೇನು ಅಧ್ಯಕ್ಷರೇ, ಅದೇ ಆಯಿತು. ಇಲ್ಲವಾದರೆ ನಾವು ಪತ್ರ ಬರೆದಾಗಲಾದರು ಸ್ಪಂದಿಸಬೇಕು. ಅದೂ ಇಲ್ಲ, ಇದೂ ಇಲ್ಲವೆಂದರೆ ಹೇಗೆ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಯಾದಗೀರ್ ತಾಲ್ಲೂಕಿನಲ್ಲಿ ಮೈನರ್ ಇರ್ರಿಗೇಶನ್ ಟ್ಯಾಂಕುಗಳು ಎಷ್ಟು ಎಂಬ ಮಾಹಿತಿ ಇಲ್ಲ, ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು.

ಅಧ್ಯಕ್ಷರು : ಈಗ ಇಲ್ಲ, ತರಿಸಿಕೊಡುತ್ತಾರೆ. ತಾವು ಸಹಕಾರ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ತಾಲ್ಲೂಕುವೈಸ್ ಫಿಗರ್ಸ್ ಕೇಳಿದಾಗ ಸಾಧಾರಣವಾಗಿ ಅವರು ಕೊಡಬೇಕಾಗುತ್ತದೆ. ಈಗ ಇಲ್ಲ, ಆಯಿತು. ನಾನುಅವರಿಗೆ ಎಂಬರ್ಯಾಸ್ ಮಾಡುವುದಿಲ್ಲ, ಆ ಮೇಲೆ ತರಿಸಿಕೊಡಿ. ಕನಿಷ್ಟ ಪಕ್ಷ ಈ ವಿಶ್ವಬ್ಯಾಂಕ್ ಏಡ್ ನಲ್ಲಿ ಗುಲ್ಬರ್ಗಾದಲ್ಲಿ ಯಾವುದು ಯಾವುದು ಇವೆ ಅಷ್ಟಾದರೂ ಹೇಳಿ. ಅದಕ್ಕೆ ಏನಾದರೂ ಹಣ ಬಂದಿದೆಯೇ ನಿಮ್ಮ ನಬಾರ್ಡ್‌ನಿಂದಾಗಲಿ ವಿಶ್ವಬ್ಯಾಂಕಿನಿಂದಾಗಲಿ, ಅದಕ್ಕೇನಾದರೂ ತಾವು ಕಾರ್ಯಕ್ರಮ ಹಾಕಿಕೊಂಡಿದ್ದಿರೋ?

ಅಧ್ಯಕ್ಷರು : ವಿಶ್ವಬ್ಯಾಂಕಿನ ಮಾಹಿತಿಯನ್ನು ಅವರು ಇಲ್ಲಿ ಏತಕ್ಕೆ ತಂದಿರುತ್ತಾರೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾಹಿತಿಯನ್ನು ತರಿಸಿ ನಂತರ ಒದಗಿಸುತ್ತೇನೆ.

ಅಧ್ಯಕ್ಷರು : ಆಯನೂರು ಮಂಜುನಾಥ್, ತಮ್ಮ ಪ್ರಶ್ನೆಗೆ ನಾನು ಅವಾಗಲೇ ಹೇಳಿದೆ ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಗೈರು ಹಾಜರಿಯಾಗುವುದಕ್ಕೆ ಅನುಮತಿ ಪಡೆದು ಕೊಂಡಿದ್ದಾರೆ. ಅವರು ಬಂದ ದಿವಸ ಅಡ್ಜೆಸ್ಟ್ ಮಾಡುತ್ತೇನೆ. ತಾವು ದಯಮಾಡಿ ಸಹಕರಿಸಬೇಕು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ, 12 ನೇ ಸೆಪ್ಟೆಂಬರ್ 1995ರ 20ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 50 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇವೆ.